# ಶ್ರೀ ರವಿಕುಮಾರ್ ಎನ್ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಇವರ ನಿಯಮ 330 ರ ಗಮನ ಸೆಳೆಯುವ ಸೂಚನೆಗೆ ಉತ್ತರ.

**ಪ್ರಶ್ನೆ:-**

ಭೋವಿ ಜಾತಿಗೆ ಪರಿಶಿಷ್ಟ ಜಾತಿಯ ಪ್ರಮಾಣ ಪತ್ರವನ್ನು ನೀಡಲು ಸಹಕಾರಿಯಾಗುವ ನಿಟ್ಟಿನಲ್ಲಿ ಶ್ರೀ ವಿ ಎಸ್ ಉಗ್ರಪ್ಪ ನವರು ನೀಡಿರುವ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸುವುದು ಅವಶ್ಯಕವಾಗಿರುವುದರಿಂದ ಈ ಕುರಿತು ಚರ್ಚಿಸಲು ಅವಕಾಶ ನೀಡುವಂತೆ ವಿನಂತಿಸುತ್ತೇನೆ.

**ಉತ್ತರ:-**

ಭಾರತ ಸರ್ಕಾರದ ಅಧಿಸೂಚನೆ ಸಂಖ್ಯೆ:BC 12016/34/76-SCT-5 Dated:-27-07-1977 ರಲ್ಲಿ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ 101 ಪರಿಶಿಷ್ಟ ಜಾತಿಗಳನ್ನು ನಮೂದಿಸಲಾಗಿದ್ದು ಕ್ರಮ ಸಂಖ್ಯೆ:-23ರಲ್ಲಿ Bhovi, Od, Odde, Vaddar, Waddar, Voddar, Woddar, Bovi (Non-Besta), Kalluvaddar, Mannuvaddar ಎಂದು ನಮೂದಿಸಲಾಗಿರುತ್ತದೆ. ಅರ್ಹ ನೈಜ ಪರಿಶಿಷ್ಟ ಜಾತಿಯವರಿಗೆ ಜಾತಿ ಪ್ರಮಾಣ ಪತ್ರವನ್ನು ಮತ್ತು ಸರ್ಕಾರಿ ಸೌಲಭ್ಯಗಳನ್ನು ನಿಯಮಾನುಸಾರ ನೀಡಲಾಗುತ್ತಿದೆ.

ಮುಂದುವರೆದು, ಭೋವಿ ಜಾತಿಗೆ ಪರಿಶಿಷ್ಟ ಜಾತಿಯ ಪ್ರಮಾಣ ಪತ್ರವನ್ನು ನೀಡುವ ಕುರಿತು ಶ್ರೀ ವಿ ಎಸ್ ಉಗ್ರಪ್ಪನವರು ನೀಡಿರುವ ವರದಿಯನ್ವಯ ಸರ್ಕಾರದ ಸುತ್ತೋಲೆ ಸಂಖ್ಯೆ:ಸಕಇ 113 ಎಸ್ಎಡಿ 2015, ದಿನಾಂಕ:13.07.2017 ರಂದು ಹೊರಡಿಸಲಾಗಿದ್ದು, ಸದರಿ ಸುತ್ತೋಲೆಯನ್ನು ಅನುಬಂಧದಲ್ಲಿ ನೀಡಲಾಗಿದೆ.

SWD/1/SAD/2026

(ಡಾ.ಹೆಚ್.ಸಿ. ಮಹದೇವಪ್ಪ)
ಸಮಾಜ ಕಲ್ಯಾಣ ಸಚಿವರು

ನಿಯಮ 330ಕ್ಕೆ ಅನುಬಂಧ

ಕರ್ನಾಟಕ ಸರ್ಕಾರ

ಸಂಖ್ಯೆ: ಸಕಇ 113 ಎಸ್‌ಎಡಿ 2015

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ,
ಬೆಂಗಳೂರು,ದಿನಾಂಕ:13.07.2017

**ಸುತ್ತೋಲೆ**

ವಿಷಯ: ಕರ್ನಾಟಕ ರಾಜ್ಯದ "ಭೋವಿ" ಜನಾಂಗದವರಿಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡುವ ಕುರಿತು.

ಉಲ್ಲೇಖ:
1) ಸುತ್ತೋಲೆ ಸಂಖ್ಯೆ: ಆರ್‌ಡಿ 967 ಎಎಸ್‌ಡಿ 2014, ದಿ:07-01-2015
2) ಸುತ್ತೋಲೆ ಸಂಖ್ಯೆ: ಸಕಇ 166 ಎಸ್‌ಎಡಿ 2014, ದಿ:01-10-2014

******

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಬಿ.ಶಾಣಪ್ಪ ರವರು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮ 330 ರಡಿಯಲ್ಲಿ ನೀಡಿರುವ ಸೂಚನೆಯಲ್ಲಿ ಮೂಲತಃ 1976ರಲ್ಲಿ ವಡ್ಡರ್, ಬಂಜಾರ, ಕೊರವ ಜನಾಂಗವನ್ನು ಮೀಸಲಾತಿಯಲ್ಲಿ ಪರಿಶಿಷ್ಟ ಜನಾಂಗದ ಪಟ್ಟಿಯಲ್ಲಿ ಸೇರಿಸಿರಲಿಲ್ಲ. ಆದರೆ ಆನಂತರದ ದಿನಗಳಲ್ಲಿ ಇವರನ್ನು ಕೇಂದ್ರ ಸರ್ಕಾರ ಈ ಪಟ್ಟಿಗೆ ಸೇರಿಸಲಾಗಿದೆ. ವಡ್ಡರ್ ಜನಾಂಗ ತಮ್ಮ ಹೆಸರನ್ನು ಬೋಯಿ ಎಂದು ಕರೆಯಲು 1944ರಲ್ಲಿ ಅಂದಿನ ಮಹಾರಾಜರಿಗೆ ಮನವಿ ಪತ್ರ ಸಲ್ಲಿಸಿದ್ದು, ಈ ಜನಾಂಗವನ್ನು ಬೋಯಿ ವಡ್ಡರ್ ಎಂದು ಪರಿಗಣಿಸಿ 1946ರಲ್ಲಿ ಮೈಸೂರು ಮಹಾರಾಜರಾದ ಶ್ರೀ ಜಯಮಚಾಮರಾಜೇಂದ್ರ ಒಡೆಯರ್ ಗೆಜೆಟ್ ಹೊರಡಿಸಿರುತ್ತಾರೆ. ಈಗ ಸುಮಾರು 101 ಜಾತಿಗಳು ಪರಿಶಿಷ್ಟ ಜನಾಂಗದ ಪಟ್ಟಿಯಲ್ಲಿ ಇದ್ದು, ಅದರಲ್ಲಿ ವಡ್ಡರ್, ಕಲ್ಲು ವಡ್ಡರ್, ಮಣ್ಣು ವಡ್ಡರ್, ವಡ್ಡ, ತುಡುಗು ವಡ್ಡರ್ ಮುಂದಾದವು ಭೋವಿ ಜಾತಿಯ ಪರ್ಯಾಯ ಹೆಸರುಗಳಿಂದ ಕರೆಯಲ್ಪಡುತ್ತಾರೆ. ರಾಯಚೂರು, ಕೊಪ್ಪಳ ಮತ್ತು ಬೆಳಗಾವಿ ಜಿಲ್ಲೆಗಳೂ ಸೇರಿದಂತೆ ರಾಜ್ಯದ ಅನೇಕ ಪ್ರದೇಶಗಳಲ್ಲಿ ಭೋವಿ ಜನಾಂಗದವರನ್ನು ಪರಿಶಿಷ್ಟ ಜಾತಿ ಎಂದು ಪರಿಗಣಿಸಿರುವುದಿಲ್ಲ. ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆದ ಭೋವಿ ಜನಾಂಗದ ಕೆಲವು ಜನರಿಗೆ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯದ ಮುಖಾಂತರ ನಾನಾ ರೀತಿಯ ತೊಂದರೆಯನ್ನು ಕೊಡುತ್ತಿದ್ದು, ಕೆಲವು ಕಡೆ ಭೋವಿ ಜಾತಿಯ ಕೆಲವರನ್ನು ಜೈಲಿಗೆ ಕಳುಹಿಸಿದ ನಿದರ್ಶನಗಳು ಇವೆ. ಭೋವಿ ಜಾತಿಯ ಕೆಲವರನ್ನು ಸರ್ಕಾರಿ ಕೆಲಸದಿಂದ ಸಹ ವಜಾ ಮಾಡಿರುತ್ತಾರೆ. ಭೋವಿ ಜನಾಂಗ ಪರಿಶಿಷ್ಟ ಜನಾಂಗದ ಪಟ್ಟಿಯಲ್ಲಿ ಅಂದಿನಿಂದ ಇಂದಿನವರೆಗೆ ಇದ್ದಾರೆ. ಈ ಬಗ್ಗೆ ಸರ್ಕಾರದ ಸುತ್ತೋಲೆಗಳನ್ನು ಎಲ್ಲಾ ಜಿಲ್ಲೆಗಳಿಗೆ ಕಳುಹಿಸಿ ಇವರನ್ನು ಭೋವಿ ಎಂದು ಪರಿಗಣಿಸಿ ಪರಿಶಿಷ್ಟ ಜಾತಿಯ ಪ್ರಮಾಣ ಪತ್ರವನ್ನು ನೀಡುವಂತೆ ಆದೇಶಿಸಲಾಗಿದೆ. ಅಲ್ಲದೇ ರಾಜ್ಯ ಉಚ್ಛನ್ಯಾಯಾಲಯವು ಕೂಡ ಭೋವಿ ಜನರು ಪರಿಶಿಷ್ಟ ಜಾತಿಯವರೆಂದು ತೀರ್ಪು ನೀಡಿದ್ದರೂ ಸಹ ಅವರಿಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರವನ್ನು ಕೆಲವು ಅಧಿಕಾರಿಗಳು ನೀಡುತ್ತಿಲ್ಲ. ಭೋವಿ ವಡ್ಡರ್ ಮಾತ್ರ ಪರಿಶಿಷ್ಟ ಜಾತಿಗೆ ಸೇರಿದವರೆಂದು ಕೆಲವು ಜಿಲ್ಲೆಯ ಅಧಿಕಾರಿಗಳು ತಕರಾರು ತೆಗೆದು ಭೋವಿ ಜಾತಿಯವರಿಗೆ ಕಿರುಕುಳ ನೀಡುತ್ತಿದ್ದಾರೆ. ಆದ್ದರಿಂದ, ಭೋವಿಗಳಿಗೆ ಶೈಕ್ಷಣಿಕ, ಉದ್ಯೋಗ ಹಾಗೂ ರಾಜಕೀಯ ರಂಗಗಳಲ್ಲಿ ಸಿಗಬೇಕಾದ ಸೌಲತ್ತುಗಳನ್ನು ನೀಡಬೇಕೆಂದು ಸದನದಲ್ಲಿ ಪ್ರಸ್ತಾಪಿಸಿರುತ್ತಾರೆ. ಇದರ ಹಿನ್ನೆಲೆಯಲ್ಲಿ ದಿನಾಂಕ:30-04-2015ರಂದು ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ವಿ.ಎಸ್.ಉಗ್ರಪ್ಪನವರ ಅಧ್ಯಕ್ಷತೆಯಲ್ಲಿ 10 ಜನ ಸದಸ್ಯರನ್ನೊಳಗೊಂಡ ವಿಶೇಷ ಸದನ ಸಮಿತಿಯನ್ನು ಮಾನ್ಯ ಸಭಾಪತಿಯವರು ರಚಿಸಿರುತ್ತಾರೆ.

ಸದರಿ ಸಮಿತಿ ಮೇಲ್ಕಂಡ ವಿಷಯದ ಬಗ್ಗೆ ವಿಚಾರಣೆ ನಡೆಸಿ ತಮ್ಮ ವರದಿಯನ್ನು ಕೆಲವು ಶಿಫಾರಸ್ಸಿನೊಂದಿಗೆ ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸಿರುತ್ತದೆ.

ಮುಖ್ಯವಾಗಿ ಶಿಫಾರಸ್ಸು ಕ್ರಮಸಂಖ್ಯೆ:1ರಲ್ಲಿ "1950ರಲ್ಲಿ ಭೋವಿ ಜಾತಿಯವರನ್ನು ಪರಿಶಿಷ್ಟ ಜಾತಿಗೆ ಸೇರಿಸಿರುವುದು ಸಂಸತ್ತು. ಅದಕ್ಕೆ ರಾಷ್ಟ್ರಪತಿಯವರ ಅಂಕಿತವಾಗಿರುತ್ತದೆ. ಅವರುಗಳನ್ನು ಪರಿಶಿಷ್ಟ ಜಾತಿ ಪಟ್ಟಿಯಿಂದ ತೆಗೆದು ಹಾಕುವ ಅಧಿಕಾರ ಕೇವಲ ಸಂಸತ್ತಿಗೆ ಮಾತ್ರ ಇರುತ್ತದೆಯೇ ಹೊರತು ಮತ್ಯಾರಿಗೂ ಇರುವುದಿಲ್ಲ. ಅವರಿಗೆ ಲಭ್ಯವಾಗಬೇಕಾಗಿರುವ ಎಲ್ಲಾ ಸೌಲಭ್ಯಗಳನ್ನು ನೀಡುವುದು ಸರ್ಕಾರ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಈ ಕಾರಣದಿಂದ ಭೋವಿ ಜಾತಿಗೆ ಸೇರಿರುವ ಎಲ್ಲರಿಗೂ ಭೋವಿ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ನೀಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ".

ಸದರಿ ಸಮಿತಿಯು ಮಾಡಿರುವ ಶಿಫಾರಸ್ಸುಗಳನ್ನು ಪರಿಶೀಲಿಸಿ, ಮೇಲ್ಕಂಡ ವಿಷಯದ ಬಗ್ಗೆ ಈ ಸುತ್ತೋಲೆ ಮೂಲಕ ಈ ಕೆಳಕಂಡಂತೆ ಸ್ಪಷ್ಟೀಕರಣವನ್ನು ನೀಡಲಾಗಿದೆ.

1) 1950ರ ಭಾರತ ಸರ್ಕಾರದ_ಆದೇಶದಲ್ಲಿ, ಅಂದಿನ ಮೈಸೂರು ರಾಜ್ಯದಲ್ಲಿ ಭೋವಿ (Bhovi) ಜಾತಿ ಪರಿಶಿಷ್ಟ
ಜಾತಿ ಪಟ್ಟಿಯಲ್ಲಿ ಸೇರಿರುತ್ತದೆ. ದಿನಾಂಕ:27-07-1977ರ (entry no.23) ಭಾರತ ಸರ್ಕಾರದ ಅಧಿಸೂಚನೆಯಂತೆ,
**'Bhovi and synonym castes are Od, Odde, Vaddar, Wadder, Voddar, Woddar** ಎಂದು
**ಇರುತ್ತದೆ. ನಂತರ ಇದನ್ನು ಭಾರತ ಸರ್ಕಾರದ ತಮ್ಮ ಪತ್ರ ಸಂಖ್ಯೆ:ಬಿಸಿ 12016/37/76 ಎಸ್.ಸಿ.ಟಿ.-ವಿ ದಿನಾಂಕ:05-**
**10-1979ರಲ್ಲಿ ಸಹ ಮೇಲಿನಂತೆ ತಿಳಿಸಿರುತ್ತಾರೆ. ಅದರಂತೆ, ರಾಜ್ಯ ಸರ್ಕಾರದಿಂದ ಸರ್ಕಾರದ ಆದೇಶ**
**ಸಂಖ್ಯೆ:ಎಸ್‌ಡಬ್ಲ್ಯೂಎಲ್ 285 ಎಸ್‌ಎಡಿ 78 ದಿನಾಂಕ:27-03-1980ರಲ್ಲಿ ಸಹ ಮೇಲ್ಕಂಡಂತೆ ನಮೂದಿಸಿ ಸರ್ಕಾರದ**
**ಆದೇಶ ಹೊರಡಿಸಲಾಗಿರುತ್ತದೆ.** ತದನಂತರ **The constitution (Scheduled Castes) orders (Second**
**Amendment) Act, 2002 notify on 17-12-2002** ರಲ್ಲಿ (entry no.23) ರಲ್ಲಿ **Bhovi, Od, Odde,**
**Vaddar, Wadder, Voddar, Woddar** ಎಂದು ನಮೂದಿಸಲಾಗಿರುತ್ತದೆ. ಈಗ 2015ರಲ್ಲಿ Mannuvaddar,
Kalluvaddar, Bovi (Non-Besta) ಜಾತಿಗಳನ್ನು ಸೇರಿಸಲಾಗಿದೆ. ಪ್ರಸ್ತುತ, ಕರ್ನಾಟಕ ಪರಿಶಿಷ್ಟ ಜಾತಿ ಪಟ್ಟಿಯ
ಕ್ರಮಸಂಖ್ಯೆ:23ರಲ್ಲಿ ಈ ರೀತಿ ಇರುತ್ತದೆ.

**''Bhovi, Od, Odde, Vaddar, Wadder, Voddar, Woddar,**
**Bovi (Non-Besta), Kalluvaddar, Mannuvaddar''**

2) ಸದರಿ ಸಮಿತಿಯ ವರದಿಯಲ್ಲಿ ಉಲ್ಲೇಖಿಸಿರುವಂತೆ, ಭೋವಿ ಸಮಾಜದವರು ಪಲ್ಲಕ್ಕಿ, ಡೋಲಿ
ಮುಂತಾದವುಗಳನ್ನು ಹೊರುವವರು ಎಂದು ಮತ್ತು ವಡ್ಡರ ಪರ್ಯಾಯ ಪದಗಳು ಆಗಲು ಸಾಧ್ಯವಿಲ್ಲವೆಂದು
ಇರುತ್ತದೆ.

3) ಈ ಹಿಂದೆ ಕೆಲವು ಅಭ್ಯರ್ಥಿಗಳು ಗಂಗಾಮತ, ಬೆಸ್ತ, ಬೋಯಿ ಇತ್ಯಾಧಿ ಹಿಂದುಳಿದ ಜಾತಿಗಳಿಗೆ ಸೇರಿದವರು
ಭೋವಿ ಎಂದು ನಮೂದಿಸಿ ಪರಿಶಿಷ್ಟ ಜಾತಿ ಪ್ರಮಾಣ ಪತ್ರಗಳನ್ನು ಪಡೆದಿರುತ್ತಾರೆ ಎಂಬುದನ್ನು ಸಹ
ಗಮನಿಸಲಾಗಿದೆ.

4) ಸರ್ಕಾರದ ಸುತ್ತೋಲೆ ಸಂಖ್ಯೆ:ಸಕಇ 225 ಬಿಸಿಎ 2000 ದಿನಾಂಕ:30-03-2002ರ ಹಿಂದುಳಿದ
ವರ್ಗಗಳ ಪ್ರವರ್ಗ-1ರಲ್ಲಿನ ಸಂಖ್ಯೆ:6 ಬೆಸ್ತ ಮತ್ತು ಅದಕ್ಕೆ ಸಂಬಂಧಿಸಿದ Bhoyi ಇತ್ಯಾಧಿ ಜಾತಿಗಳು ಹಾಗೂ
ಕ್ರ.ಸಂ.93 ರಲ್ಲಿ Bhoi, Boyi, Harikantra, Kharia, Bovi ಇವರುಗಳು ಹಿಂದುಳಿದ ವರ್ಗಗಳಿಗೆ ಸೇರಿದ್ದು,
ಇವರು "ಭೋವಿ" ಎಂದು ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆಯಲು ಅರ್ಹರಿರುವುದಿಲ್ಲ.

5) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿಯಲ್ಲಿ
ಮೀಸಲಾತಿ ಇತ್ಯಾದಿ) ಕಾಯ್ದೆ 1990ರ ಪ್ರಕಾರ ಮತ್ತು ಅದರಡಿ ಹೊರಡಿಸಿದ ನಿಯಮಗಳು 1992 ಮತ್ತು ಸದರಿ
ಕಾಯ್ದೆ ತಿದ್ದುಪಡಿ 2004 ಮತ್ತು 2012ರ ಪ್ರಕಾರ ಸ್ಥಳ ದಾಖಲೆಗಳ ಪರಿಶೀಲನೆ ಮತ್ತು ಸ್ಥಳೀಯ ವಿಚಾರಣೆ
ಇತ್ಯಾದಿ ಮೂಲಕ ಕರ್ನಾಟಕ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಕ್ರ.ಸಂ.23ರಲ್ಲಿರುವ ಅರ್ಹ ನೈಜ "ಭೋವಿ"
ಜನಾಂಗಕ್ಕೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರಗಳನ್ನು ನೀಡಲು ಸಂಬಂಧಪಟ್ಟ ತಹಶೀಲ್ದಾರರು ಅಗತ್ಯ ಕ್ರಮ
ಕೈಗೊಳ್ಳುವಂತೆ ಸೂಚಿಸಲಾಗಿದೆ.

6) ಮೀಸಲಾತಿ ಕಾಯ್ದೆ 1990ರ ಪ್ರಕಾರ ತಹಸೀಲ್ದಾರರು ಜಾತಿ ಪ್ರಮಾಣ ಪತ್ರ ನೀಡುವ
ಅಧಿಕಾರಿಯಾಗಿರುತ್ತಾರೆ. ಆದರೆ ಅವರು ಜಾತಿ ಪ್ರಮಾಣ ಪತ್ರಗಳನ್ನು ಕೋರಿ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಿದಲ್ಲಿ,
ಆ ಬಗ್ಗೆ ಸೂಕ್ತ ಕಾರಣಗಳನ್ನು ನೀಡಿ, ವಿವರವಾದ ಆದೇಶ ಹೊರಡಿಸಬೇಕಾಗಿದೆ. ಸದರಿ ಆದೇಶದ ವಿರುದ್ಧ ನೊಂದ
ಅಭ್ಯರ್ಥಿಗಳು ಉಪವಿಭಾಗಾಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ.

7) **ಸದರಿ** ಸಮಿತಿ ಸೂಚಿಸಿರುವಂತೆ, ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಬರುವ ಜಾತಿಗಳು ಈ ಹಿಂದೆ ಕೆಲವು
ಕಸುಬುಗಳನ್ನು ಮಾಡುತ್ತಿದ್ದು, ಈಗ ಅಂತಹ ಕಸುಬುಗಳನ್ನು ಮಾಡದೇ ಇದ್ದರೂ, ಸಹ ಅಂತಹವರುಗಳಿಗೆ
ನಿಯಮಾನುಸಾರ ದಾಖಲಾತಿಗಳನ್ನು ಪರಿಶೀಲಿಸಿ, ಸ್ಥಳ ತನಿಖೆ ನಡೆಸಿ, ವಿಳಂಬ ಮಾಡದೇ ಜಾತಿ ಪ್ರಮಾಣ
ಪತ್ರಗಳನ್ನು ನೀಡಲು ಕ್ರಮವಹಿಸುವುದು.

--3

8) ಜಾತಿ ಪ್ರಮಾಣ ಪತ್ರಗಳನ್ನು ನೀಡುವ ಬಗ್ಗೆ ಉಪವಿಭಾಗಾಧಿಕಾರಿಗಳು ಪ್ರತಿ 3 ತಿಂಗಳಿಗೊಮ್ಮೆಯಾದರೂ ತಾಲ್ಲೂಕು ತಹಶೀಲ್ದಾರರು ಮತ್ತು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳ ಸಭೆಗಳನ್ನು ನಡೆಸಿ ಸಮಸ್ಯೆಗಳಿದ್ದಲ್ಲಿ, ಅವುಗಳನ್ನು ನಿಯಮಾನುಸಾರ ಬಗೆಹರಿಸಲು ಕ್ರಮವಹಿಸುವುದು.

9) ಜಿಲ್ಲಾಧಿಕಾರಿಗಳು ಸಹ ಜಾತಿ ಪ್ರಮಾಣ ಪತ್ರ ನೀಡುವ ಬಗ್ಗೆ ಹಾಗೂ ಸಾಮಾಜಿಕ ನ್ಯಾಯ ಪರಿಕಲ್ಪನೆ ಬಗ್ಗೆ ಸಂಬಂಧಿಸಿದ ಜಿಲ್ಲಾ/ಉಪವಿಭಾಗ/ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಕಾಲಕಾಲಕ್ಕೆ ಸಮೀಕ್ಷೆ/ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಸೂಚಿಸಲಾಗಿದೆ.

(ರಾಜಶ್ರೀ ಹೆಚ್.ಕುಲಕರ್ಣಿ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಸಮಾಜ ಕಲ್ಯಾಣ ಇಲಾಖೆ.

**ಇವರಿಗೆ;**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ಅಡಿಷನಲ್ ಜನರಲ್ ಆಫ್ ಪೋಲೀಸ್, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು.
4. ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು
5. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ.
6. ಎಲ್ಲಾ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ
7. ಎಲ್ಲಾ ತಾಲ್ಲೂಕು ತಹಶೀಲ್ದಾರರಿಗೆ.

(5–7) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಮುಖಾಂತರ

8. ಅಧ್ಯಕ್ಷರು, ಅಖಿಲ ಕರ್ನಾಟಕ ಭೋವಿ ಸಮಾಜ ವಿವಿದ್ದೋದ್ದೇಶ ಕಲ್ಯಾಣ ಸಂಘ (ರಿ), ಹಳೇ ಭೋವಿಗಲ್ಲಿ ಸರಫ್ ಬಜಾರ್, ಕಲಬುರಗಿ-585101.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿಗಳು:**

1. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು.

******